# ಮೈಸೂರು ವಿಶ್ವವಿದ್ಯಾನಿಲಯ

Estd-1916

(Re-accredited by NAAC with CGPA 3.47 on four point scale with A grade)

ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005

ಸಂಖ್ಯೆ:ಪ.ವಿ.8.4/47/2012-13

ದಿನಾಂಕ: 02-01-2021

## ಪರಿಷ್ಕೃತ ಅಧಿಸೂಚನೆ

ವಿಷಯ: ಜನವರಿ 2021ರಲ್ಲಿ ಜರುಗಲಿರುವ ಬಿ.ಎಡ್. ಪದವಿಯ II & IV ಸೆಮಿಸ್ಟರ್ ಪರೀಕ್ಷೆಯ ಪರೀಕ್ಷಾ ಶುಲ್ಕಗಳ ರಿಯಾಯಿತಿ ಬಗೆಗೆ.

ಉಲ್ಲೇಖ: 1. ಈ ಕಛೇರಿಯ ಅಧಿಸೂಚನೆ ಸಂಖ್ಯೆ.ಪ.ವಿ.4/47/2012-13, ದಿನಾಂಕ: 26-11-2020.
2.ಆದೇಶ ಸಂಖ್ಯೆ:ಎಸಿ2(ಎಸ್)/363/2020-21 ದಿನಾಂಕ: 30-11-2020.

*****

ಉಲ್ಲೇಖ-1ರ ಜನವರಿ 2021ರಲ್ಲಿ ಜರುಗಲಿರುವ II & IV ಸೆಮಿಸ್ಟರ್ ಬಿ.ಎಡ್. ಪದವಿಯ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕ ಪಾವತಿಸಲು ಸೂಚಿಸಲಾಗಿತ್ತು. ಉಲ್ಲೇಖ-2ರಂತೆ 2019-20ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ/ಸ್ನಾತಕೋತ್ತರ Intermediate Semester ಪರೀಕ್ಷಾ ಶುಲ್ಕ ಪಾವತಿಸಿದ ವಿದ್ಯಾರ್ಥಿಗಳಿಗೆ ಮುಂದಿನ ಸೆಮಿಸ್ಟರ್‌ನ ಪರೀಕ್ಷಾ ಶುಲ್ಕಕ್ಕೆ ಶೇಕಡ 50%ರನ್ನು ರಿಯಾಯಿತಿ ನೀಡಲು ಆದೇಶಿಸಿರುವ ಹಿನ್ನೆಲೆಯಲ್ಲಿ, ಈಗಾಗಲೇ ಹೊರಡಿಸಿರುವ ಅಧಿಸೂಚನೆಯಲ್ಲಿನ ಪರೀಕ್ಷಾ ಶುಲ್ಕಕ್ಕೆ ರಿಯಾಯಿತಿಯನ್ನು ಕೆಳಕಂಡಂತೆ ನೀಡಲಾಗಿದೆ. ಈ ಶುಲ್ಕವು ಇದೊಂದು ಬಾರಿ ಮಾತ್ರ ಅನ್ವಯವಾಗುತ್ತದೆ.

| ಪರೀಕ್ಷಾ ಶುಲ್ಕಗಳು : ಶೇ.100 ರಷ್ಟು | ಪರೀಕ್ಷಾ ಶುಲ್ಕಗಳು : ಶೇ.50 ರಷ್ಟು |
|---|---|
| ಪೂರ್ಣ ಪರೀಕ್ಷೆಗೆ -ರೂ.1300-00 | - ರೂ.650-00 |
| ಒಂದು ವಿಷಯಕ್ಕೆ (ಪ್ರಾಯೋಗಿಕ ಪರೀಕ್ಷೆಯೊಂದಿಗೆ) - ರೂ. 770-00 | - ರೂ. 385-00 |
| ಒಂದು ವಿಷಯಕ್ಕೆ (ಪ್ರಾಯೋಗಿಕ ಪರೀಕ್ಷೆ ಇಲ್ಲದೆ ಇರುವ) - ರೂ. 440-00 | - ರೂ. 220-00 |
| **ಅಂಕಪಟ್ಟಿ ಶುಲ್ಕ - ರೂ.320.00** | **ಅಂಕ ಪಟ್ಟಿ ಶುಲ್ಕ - ರೂ.320.00 (ರಿಯಾಯಿತಿ ಇಲ್ಲ)** |

ಈ ರಿಯಾಯಿತಿಯು ಹೊಸದಾಗಿ ಪರೀಕ್ಷೆ ತೆಗೆದುಕೊಳ್ಳುತ್ತಿರುವ ವಿದ್ಯಾರ್ಥಿಗಳಿಗೆ (Freshers only) ಮಾತ್ರ ಅನ್ವಯವಾಗುತ್ತದೆ. ಅನುತ್ತೀರ್ಣಗೊಂಡ (Repeaters) ವಿದ್ಯಾರ್ಥಿಗಳಿಗೆ ಈ ರಿಯಾಯಿತಿಯು ಅನ್ವಯವಾಗುವುದಿಲ್ಲ.

ಈಗಾಗಲೇ ವಿದ್ಯಾರ್ಥಿಗಳಿಂದ ಪೂರ್ಣ ಪ್ರಮಾಣದ ಪರೀಕ್ಷಾ ಶುಲ್ಕ ಸಂಗ್ರಹಿಸಿದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಶೇ.50ರಷ್ಟು ಶುಲ್ಕವನ್ನು ಹಿಂದಿರುಗಿಸಲು ಸಂಬಂಧಪಟ್ಟ ಕಾಲೇಜುಗಳ ಮುಖ್ಯಸ್ಥರುಗಳು ಕ್ರಮ ಕೈಗೊಳ್ಳುವುದು.

ಕಾಲೇಜಿನವರು ದಿನಾಂಕ: 05.01.2021 ರೊಳಗೆ ಪರೀಕ್ಷಾ ಶುಲ್ಕಗಳನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸಲು ಕ್ರಮಕೈಕೊಳ್ಳುವುದು.

ಉಳಿದಂತೆ ಉಲ್ಲೇಖ-1ರಲ್ಲಿ ಇತರೆ ಅಂಶಗಳು ಯಥಾವತ್ತಾಗಿರುತ್ತದೆ.

2/1/21

**ಕುಲಸಚಿವ (ಪರೀಕ್ಷಾಂಗ)**

ಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಎಡ್. ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಉಪಕುಲಸಚಿವರು (ಶೈಕ್ಷಣಿಕ), ಆಡಳಿತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ವಿಶೇಷಾಧಿಕಾರಿಗಳು, ಪರೀಕ್ಷಾ ಸುಧಾರಣಾ ಘಟಕ, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ವ್ಯವಸ್ಥಾಪಕರು, ಮೆ: ಮೆಟಾ-ಐ ಟೆಕ್ನಾಲಾಜೀಸ್ ಪ್ರೈವೇಟ್ ಲಿಮಿಟೆಡ್, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಅಧೀಕ್ಷಕರು/ವಿಷಯ ನಿರ್ವಾಹಕರು, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಉಪ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ವಾರ್ತಾ ಭವನ, ಎಚ್.ಸಿ.ದಾಸಪ್ಪ ವೃತ್ತ, ಮೈಸೂರು- ಮೇಲ್ಕಂಡ ಪ್ರಕಟಣೆಯ ಮುಖ್ಯಾಂಶಗಳನ್ನು ಎಲ್ಲಾ ದೈನಂದಿನ ಪತ್ರಿಕೆಗಳಲ್ಲಿ ಉಚಿತವಾಗಿ ಪ್ರಸಾರ ಮಾಡಲು ಸೂಕ್ತ ಕ್ರಮಕ್ಕಾಗಿ 05 ಪ್ರತಿಗಳೊಂದಿಗೆ.
8. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ (ಪರೀಕ್ಷಾಂಗ)/ಹಣಕಾಸು ಅಧಿಕಾರಿಯವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಸಂಬಂಧಿಸಿದ ಕಡತಕ್ಕೆ.